# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ.ಎ ತಿಪ್ಪೇಸ್ವಾಮಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 869**

**ಉತ್ತರಿಸಬೇಕಾದ ದಿನಾಂಕ : 09.03.2021**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19, 2019-20 ಮತ್ತು 2020-21ನೇ ಸಾಲುಗಳಲ್ಲಿ ಆಯವ್ಯಯದಲ್ಲಿ ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ರೈತರು ಪಡೆದ ಸಾಲವನ್ನು ಮನ್ನಾ ಮಾಡಲು ಸಾಲಮನ್ನಾ ಯೋಜನೆ ಅಡಿ ಒದಗಿಸಿದ ಹಣವೆಷ್ಟು; | **ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲಮನ್ನಾ ಯೋಜನೆಯಡಿಯಲ್ಲಿ 2018-19, 2019-20 ಮತ್ತು 2020-21 ನೇ ಸಾಲುಗಳಲ್ಲಿ ಕ್ರಮವಾಗಿ ರೂ. 2600.00 ಕೋಟಿ, ರೂ. 6150.00 ಕೋಟಿ ಮತ್ತು ರೂ. 361.00 ಕೋಟಿಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.<br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>2018ನೇ ಸಾಲಿನ ಆಯವ್ಯಯದಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ರೈತರು ಪಡೆದ ಸಾಲವನ್ನು ಮನ್ನಾ ಮಾಡಲು, ಸಾಲ ಮನ್ನಾ ಯೋಜನೆಯಡಿ ಒಟ್ಟು ರೂ.7,300 ಕೋಟಿ ಬಿಡುಗಡೆಯಾಗಿದ್ದು, ಈ ಹಣದಲ್ಲಿ ಮೀನುಗಾರರ ಸಾಲ ಮನ್ನಾ ಯೋಜನೆಗೆ ರೂ. 49.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ, ಉಳಿದ ಮೊತ್ತ ರೂ. 7,251.00 ಕೋಟಿಗಳನ್ನು ಬೆಳೆ ಸಾಲಮನ್ನಾ ಯೋಜನೆ ಅನುಷ್ಠಾನಕ್ಕೆ ಉಪಯೋಗಿಸಿಕೊಳ್ಳಲಾಗಿದೆ. |
| ಆ) | ಈ ಅನುದಾನದಲ್ಲಿ 2018-19, 2019-20 ಮತ್ತು 2020-21ನೇ ಸಾಲುಗಳಲ್ಲಿ ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳು ರೈತರ ಸಾಲಮನ್ನಾ ಮಾಡಿದ ಹಣವೆಷ್ಟು; (ಜಿಲ್ಲಾವಾರು ಮತ್ತು ಬ್ಯಾಂಕುವಾರು ಮಾಹಿತಿ ನೀಡುವುದು) | **ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲಮನ್ನಾ ಯೋಜನೆಯಡಿಯಲ್ಲಿ 2018-19, 2019-20ನೇ ಸಾಲುಗಳಲ್ಲಿ ಕ್ರಮವಾಗಿ ರೂ.2600.00 ಕೋಟಿ, ರೂ. 5092.33 ಕೋಟಿಗಳ ಅನುದಾನವನ್ನು ಸಹಕಾರ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ. 2020-21 ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. ಜಿಲ್ಲಾವಾರು ಮತ್ತು ಬ್ಯಾಂಕುವಾರು ಅನುದಾನ ಬಿಡುಗಡೆ ಮಾಡಿದ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ರಾಜ್ಯದ ರೈತರಿಗೆ ಬೆಳೆ ಸಾಲ ಮನ್ನಾ ಯೋಜನೆ 2018ರಡಿ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಒಟ್ಟು 9,22,673 ರೈತರ ಖಾತೆಗಳಿಗೆ ರೂ. 7,247.89 ಕೋಟಿಗಳನ್ನು ಜಮೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ಮತ್ತು ಬ್ಯಾಂಕುವಾರು ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಇ) | ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ವಿಧಿಸಿರುವ ಷರತ್ತುಗಳು ಹಾಗೂ ಮಾನದಂಡಗಳನ್ನು ರೈತರು ಪೂರೈಸಿದ್ದು, ಸರ್ಕಾರ | **ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ವಿಧಿಸಿರುವ ಷರತ್ತುಗಳು ಹಾಗೂ ಮಾನದಂಡಗಳನ್ನು ಪೂರೈಸಿರುವ 57,229 ರೈತರಿಗೆ ರೂ. 295.14 ಕೋಟಿಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ. |

| | | |
|---|---|---|
| | ಅಗತ್ಯವಿರುವ ಅನುದಾನವನ್ನು ಪೂರೈಸದಿರುವುದರಿಂದ, ರೈತರ ಸಾಲಮನ್ನಾ ಆಗದೇ ಉಳಿದಿರುವ ಪ್ರಕರಣಗಳೆಷ್ಟು ಮತ್ತು ತಂತ್ರಾಂಶ ದೋಷದಿಂದ ರೈತರ ಸಾಲಮನ್ನಾ ಆಗದಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ಮತ್ತು ಬ್ಯಾಂಕುವಾರು ವಿವರ ನೀಡುವುದು) | ರೈತರು ಸಹಕಾರ ಸಂಘಗಳಿಗೆ ಸಲ್ಲಿಸಿದ ಆಧಾರ್, ಪಡಿತರ ಚೀಟಿ ಮತ್ತು ಭೂಮಿ ದಾಖಲೆಗಳು ಸಂಬಂಧಿಸಿದ ಪ್ರಾಧಿಕಾರದ ದತ್ತಾಂಶಕ್ಕೆ ತಾಳೆಯಾಗದೇ ಇರುವುದರಿಂದ ಮತ್ತು ಸಹಕಾರ ಸಂಘಗಳು ರೈತರ ಮಾಹಿತಿಯನ್ನು ತಪ್ಪಾಗಿ ಅಳವಡಿಸಿರುವುದರಿಂದ 62,056 ರೈತರ ಸಾಲ ಮನ್ನಾ ಅರ್ಹತೆ ಗುರುತಿಸಲು ಬಾಕಿ ಉಳಿದಿರುವ ಪ್ರಕರಣಗಳಿರುತ್ತವೆ. ಜಿಲ್ಲಾವಾರು ಮತ್ತು ಬ್ಯಾಂಕುವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ವಿಧಿಸಿರುವ ಷರತ್ತುಗಳು ಹಾಗೂ ಮಾನದಂಡಗಳನ್ನು ರೈತರು ಪೂರೈಸಿದ್ದು, ರೈತರ ಸಾಲ ಮನ್ನಾ ಆಗದೇ ಒಟ್ಟು 54,254 ಪ್ರಕರಣಗಳು ಬಾಕಿ ಉಳಿದಿರುತ್ತವೆ. ಈ ಸಂಬಂಧ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ. ತಂತ್ರಾಂಶ ದೋಷದಿಂದ ರೈತರ ಸಾಲಮನ್ನಾ ಆಗದೇ ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. ಜಿಲ್ಲಾವಾರು ವಿವರಗಳನ್ನು **ಅನುಬಂಧ-4** ಮತ್ತು ಬ್ಯಾಂಕವಾರು ವಿವರಗಳನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ |
| ಈ) | ಎಲ್ಲಾ ಷರತ್ತು ಹಾಗೂ ಮಾನದಂಡಗಳೇನು; ಪೂರೈಸಿರುವ ಅರ್ಹತೆಯುಳ್ಳ ರೈತರ ಸಾಲ ಮನ್ನಾ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | **ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಬೆಳೆ ಸಾಲ ಮನ್ನಾ ಯೋಜನೆ 2018ರ ಷರತ್ತು ಹಾಗೂ ಮಾನದಂಡಗಳ ಆದೇಶದ ಪ್ರತಿಗಳನ್ನು **ಅನುಬಂಧ-1 (ಅ) ಮತ್ತು (ಆ)** ರಲ್ಲಿ ನೀಡಲಾಗಿದೆ.<br><br>2020-21ನೇ ಸಾಲಿನಲ್ಲಿ ಸಾಲ ಮನ್ನಾ ಯೋಜನೆ ಲಭ್ಯವಿರುವ ಅನುದಾನದಲ್ಲಿ ಎಲ್ಲಾ ಷರತ್ತು ಹಾಗೂ ಮಾನದಂಡಗಳನ್ನು ಪೂರೈಸಿ ಸದ್ಯ ಅರ್ಹತೆ ಹೊಂದಿರುವ ರೈತರಿಗೆ ರೂ. 295.14 ಕೋಟಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಹಣ ಬಿಡುಗಡೆಯಾದ ತಕ್ಷಣ ರೈತರಿಗೆ ಪಾವತಿಸಲಾಗುವುದು.<br><br>**ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ**<br>ಬೆಳೆ ಸಾಲ ಮನ್ನಾ ಯೋಜನೆ 2018ರ ಷರತ್ತು ಹಾಗೂ ಮಾನದಂಡಗಳ ಆದೇಶದ ಪ್ರತಿಗಳನ್ನು **ಅನುಬಂಧ-06, ಅನುಬಂಧ-07** ಮತ್ತು **ಅನುಬಂಧ-08** ರಲ್ಲಿ ನೀಡಲಾಗಿದೆ.<br><br>ಎಲ್ಲಾ ಷರತ್ತು ಹಾಗೂ ಮಾನದಂಡಗಳನ್ನು ಪೂರೈಸಿರುವ ಅರ್ಹತೆಯುಳ್ಳ ರೈತರ ಸಾಲ ಮನ್ನಾ ಮಾಡಲು ಸರ್ಕಾರವು ಅಗತ್ಯ ಅನುದಾನವನ್ನು ಆಗಿಂದಾಗ್ಗೆ ಬಿಡುಗಡೆ ಮಾಡಲು ಕ್ರಮವಹಿಸಿದೆ. |

**ಸಂಖ್ಯೆ: ಸಿಒ 64 ಸಿಎಲ್‌ಎಸ್ 2021**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**

ಅನುಬಂಧ - 1

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 869 ಕ್ಕೆ ಕ್ಕೆ ಅನುಬಂಧ — 1**

ಸಹಕಾರ ಸಂಘಗಳ ಸಾಲ ಮನ್ನಾ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡಿರುವ ವಿವರ

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಸಾಲ ಮನ್ನಾ ಸೌಲಭ್ಯ ಪಡೆದ ರೈತರ ವಿವರ | | ಅನುದಾನ ಬಿಡುಗಡೆ ಮಾಡಿದ ರೈತರ ವಿವರ | | ಅನುದಾನ ಬಿಡುಗಡೆ ಮಾಡಲು ಬಾಕಿ ಇರುವ ರೈತರ ವಿವರ | | ಅರ್ಹತೆ ಗುರುತಿಸಲು ಬಾಕಿ ಉಳಿದಿರುವ ಪ್ರಕರಣಗಳು |
|---|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | |
| 1 | ಬಾಗಲಕೋಟೆ | 129856 | 695.21 | 121029 | 644.27 | 8827 | 50.94 | 5303 |
| 2 | ಬೆಂಗಳೂರು ಗ್ರಾ. | 16830 | 79.02 | 16337 | 76.56 | 493 | 2.46 | 174 |
| 3 | ಬೆಂಗಳೂರು ನಗರ | 7695 | 39.29 | 7257 | 36.94 | 438 | 2.36 | 184 |
| 4 | ಬೆಳಗಾವಿ | 265690 | 1050.08 | 260330 | 1022.09 | 5360 | 27.99 | 8860 |
| 5 | ಬಳ್ಳಾರಿ | 62797 | 365.30 | 61043 | 353.02 | 1754 | 12.28 | 1615 |
| 6 | ಬೀದರ್ | 101882 | 422.31 | 97808 | 402.25 | 4074 | 20.06 | 3923 |
| 7 | ವಿಜಯಪುರ | 148831 | 611.82 | 138858 | 567.30 | 9973 | 44.52 | 5682 |
| 8 | ಚಾಮರಾಜನಗರ | 16421 | 100.54 | 16089 | 98.33 | 332 | 2.20 | 967 |
| 9 | ಚಿಕ್ಕಬಳ್ಳಾಪುರ | 11113 | 86.74 | 11065 | 86.31 | 48 | 0.42 | 60 |
| 10 | ಚಿಕ್ಕಮಗಳೂರು | 26192 | 171.63 | 25541 | 166.83 | 651 | 4.80 | 486 |
| 11 | ಚಿತ್ರದುರ್ಗ | 34909 | 159.49 | 33742 | 152.38 | 1167 | 7.11 | 366 |
| 12 | ದಕ್ಷಿಣ ಕನ್ನಡ | 58380 | 432.81 | 58065 | 430.20 | 315 | 2.61 | 3520 |
| 13 | ದಾವಣಗೆರೆ | 60457 | 206.34 | 57509 | 194.70 | 2948 | 11.64 | 2320 |
| 14 | ಧಾರವಾಡ | 13743 | 56.98 | 13156 | 54.13 | 587 | 2.85 | 221 |
| 15 | ಗದಗ | 16055 | 62.29 | 15649 | 60.54 | 406 | 1.76 | 952 |
| 16 | ಕಲಬುರಗಿ | 41043 | 112.46 | 39266 | 108.10 | 1777 | 4.35 | 5278 |
| 17 | ಹಾಸನ | 114019 | 470.16 | 111710 | 458.94 | 2309 | 11.22 | 1851 |
| 18 | ಹಾವೇರಿ | 20852 | 67.33 | 20502 | 66.04 | 350 | 1.29 | 297 |
| 19 | ಕೊಡಗು | 27995 | 218.23 | 26416 | 204.95 | 1579 | 13.28 | 1645 |
| 20 | ಕೋಲಾರ | 9783 | 87.45 | 9691 | 86.62 | 92 | 0.83 | 194 |
| 21 | ಕೊಪ್ಪಳ | 22313 | 93.25 | 21869 | 90.76 | 444 | 2.49 | 316 |
| 22 | ಮಂಡ್ಯ | 105945 | 492.95 | 103113 | 478.28 | 2832 | 14.67 | 3156 |
| 23 | ಮೈಸೂರು | 49430 | 326.33 | 48537 | 319.75 | 893 | 6.58 | 2189 |
| 24 | ರಾಯಚೂರು | 47600 | 223.32 | 45783 | 213.02 | 1817 | 10.30 | 1473 |
| 25 | ರಾಮನಗರ | 36358 | 167.12 | 35328 | 162.08 | 1030 | 5.05 | 574 |
| 26 | ಶಿವಮೊಗ್ಗ | 31416 | 127.59 | 30809 | 124.48 | 607 | 3.11 | 1303 |
| 27 | ತುಮಕೂರು | 116401 | 411.98 | 112186 | 393.94 | 4215 | 18.03 | 4809 |
| 28 | ಉಡುಪಿ | 21149 | 145.44 | 21050 | 144.66 | 99 | 0.78 | 966 |
| 29 | ಉತ್ತರ ಕನ್ನಡ | 79146 | 477.44 | 78089 | 470.28 | 1057 | 7.16 | 2186 |
| 30 | ಯಾದಗಿರಿ | 11748 | 26.59 | 10993 | 24.58 | 755 | 2.00 | 1186 |
| | ಒಟ್ಟು | **1706049** | **7987.47** | **1648820** | **7692.33** | **57229** | **295.14** | 62056 |

ಸಹಕಾರ ಸಂಘಗಳ ಅಪರ ನಿಬಂಧಕರು,

(ಪತ್ತು)

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-I | ಬೆಂಗಳೂರು, ಮಂಗಳವಾರ, ಆಗಸ್ಟ್ ೧೪, ೨೦೧೮ (ಶ್ರಾವಣ ೨೩, ಶಕ ವರ್ಷ ೧೯೪೦) | ನಂ. ೧೨೬೯ |
|---|---|---|
| *Part-I* | *Bengaluru, Tuesday, August 14, 2018 (Shravana 23, Shaka Varsha 1940)* | *No. 1269* |


**ಕರ್ನಾಟಕ ಸರ್ಕಾರದ ನಡವಳಿಗಳು**

**ಸಹಕಾರ ಸಚಿವಾಲಯ**

ವಿಷಯ: ರಾಜ್ಯದ ರೈತರು ಸಹಕಾರ ಸಂಘ/ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ:10.07.2018 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ: ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟದ ಕಾರ್ಯಸೂಚಿ ಸಂಖ್ಯೆ 9ರಲ್ಲಿ ಅನುಮೋದನೆ.

ಪ್ರಸ್ತಾವನೆ:

ರಾಜ್ಯದಲ್ಲಿ ಕಳೆದ 4 ವರ್ಷಗಳ ಅವಧಿಯಲ್ಲಿ ಮೂರು ವರ್ಷಗಳಲ್ಲಿ ತೀವ್ರ ಬರಗಾಲ ಉಂಟಾದ ಹಿನ್ನೆಲೆಯಲ್ಲಿ ಸಂಪೂರ್ಣ ಸಾಲ ಮನ್ನಾ ಮಾಡಲು ರೈತರು, ರೈತ ಪ್ರತಿನಿಧಿಗಳು, ಸಹಕಾರಿಗಳು ಮತ್ತು ಜನಪ್ರತಿಗಳಿಂದ ಬೇಡಿಕೆ ಇರುತ್ತದೆ.

ಆಯವ್ಯಯ ಭಾಷಣದ ಚರ್ಚೆಯ ಸಂದರ್ಭದಲ್ಲಿ ವಿಧಾನ ಮಂಡಲದ ಅನೇಕ ಮಾನ್ಯ ಸದಸ್ಯರು ಸಹಕಾರ ಸಂಘಗಳಲ್ಲಿ ಸಾಲ ಪಡೆದ ಹೆಚ್ಚಿನ ರೈತರಿಗೆ ಪ್ರಸ್ತುತ ಘೋಷಣೆಯಾಗಿರುವ ಸಾಲ ಮನ್ನಾ ಯೋಜನೆಯಿಂದ ಪ್ರಯೋಜನವಾಗುವುದಿಲ್ಲವೆಂದು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ, ದಿನಾಂಕ 12.07.2018ರಂದು ವಿಧಾನಸಭೆಯಲ್ಲಿ 2018-19ನೇ ಸಾಲಿನ ಆಯವ್ಯಯ ಭಾಷಣದ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಕಾರ ಸಂಘಗಳಲ್ಲಿ ಬೆಳೆ ಸಾಲ ಪಡೆದು ದಿನಾಂಕ:10.07.2018 ರವರೆಗೆ ಹೊರಬಾಕಿ ಹೊಂದಿದ ರೈತರಿಗೂ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವುದಾಗಿ ಘೋಷಿಸಿರುತ್ತಾರೆ.

ಮೇಲೆ ಓದಲಾದ ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟ ಕಾರ್ಯಸೂಚಿ ಕ್ರಮ ಸಂಖ್ಯೆ-9 ರಲ್ಲಿ ರಾಜ್ಯದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ: 10.07.2018 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರೆತಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 163 ಸಿಎಲ್ಎಸ್ 2018, ಬೆಂಗಳೂರು, ದಿನಾಂಕ: 14.08.2018**

ರಾಜ್ಯದ ಸಹಕಾರ ಸಂಸ್ಥೆಗಳು / ಬ್ಯಾಂಕುಗಳು ವಿತರಿಸಿದ ಅಲ್ಪಾವಧಿ ಬೆಳೆ ಸಾಲದ ಪೈಕಿ ದಿನಾಂಕ: 10.07.2018ಕ್ಕೆ ಹೊಂದಿರುವ ಹೊರಬಾಕಿ ಮೊತ್ತದಲ್ಲಿ ಒಂದು ರೈತ ಕುಟುಂಬಕ್ಕೆ ಗರಿಷ್ಠ ರೂ.1,00,000.00(ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳವರೆಗಿನ ಸಾಲವನ್ನು ಮನ್ನಾ ಮಾಡಲು ತೀರ್ಮಾನಿಸಿ, ಈ ಕೆಳಕಂಡ ಷರತ್ತಿಗೊಳಪಟ್ಟು ಆದೇಶ ಹೊರಡಿಸಲಾಗಿದೆ.

1. ಈ ಸೌಲಭ್ಯವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್, ಡಿಸಿಸಿ ಬ್ಯಾಂಕುಗಳು ಮತ್ತು ಪಿಕಾರ್ಡ್ ಬ್ಯಾಂಕುಗಳು ವಿತರಿಸಿದ ಅಲ್ಪಾವಧಿ ಬೆಳೆ ಸಾಲದ ಪೈಕಿ ದಿನಾಂಕ:10.07.2018ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ.
2. ದಿನಾಂಕ:10.07.2018ಕ್ಕೆ ಇರುವ ಸಾಲದ ಹೊರಬಾಕಿಯಲ್ಲಿ ಒಂದು ರೈತ ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲವನ್ನು ಮನ್ನಾ ಮಾಡಲಾಗುವುದು.
3. ಮೇಲಿನ ಅವಧಿಯಲ್ಲಿ ಸಾಲ ಪಡೆದ ರೈತರು ಮೃತಪಟ್ಟಿದಲ್ಲಿ, ಅಂತಹ ವಾರಸುದಾರರಿಗೂ ಸಹ ಈ ಸೌಲಭ್ಯ ದೊರೆಯುತ್ತದೆ.

4. ಯೋಜನೆಯಡಿಯಲ್ಲಿ ಮನ್ನಾ ಮಾಡುವ ಸಾಲವು, ರೈತರು ಸಾಲ ಮರುಪಾವತಿ ಮಾಡುವ ಗಡುವು ದಿನಾಂಕಕ್ಕೆ ಜಾರಿಗೆ ಬರುತ್ತದೆ.
5. ದಿನಾಂಕ:10.07.2018ಕ್ಕೆ ಹೊರಬಾಕಿ ಇರುವ ಮೊತ್ತವನ್ನು ಸರ್ಕಾರದ ಆದೇಶ ಜಾರಿಯಾಗುವ ದಿನಾಂಕಕ್ಕೆ ಪೂರ್ಣವಾಗಿ ಮರುಪಾವತಿಸಿದ್ದಲ್ಲಿ ಮನ್ನಾ ಆಗಬೇಕಾದ ಮೊತ್ತವನ್ನು ರೈತರ ಉಳಿತಾಯ ಖಾತೆಗೆ ಜಮಾ ನೀಡಲಾಗುವುದು.
6. ಯೋಜನೆಯಲ್ಲಿ ಸಾಲ ಮನ್ನಾ ಆಗುವ ಅನುದಾನವನ್ನು ಡಿ.ಬಿ.ಟಿ. (Direct Benefit Transfer) ಮೂಲಕ ರೈತರ ಉಳಿತಾಯ ಖಾತೆಗೆ ಬಿಡುಗಡೆ ಮಾಡಲಾಗುವುದು.
7. ಈ ಯೋಜನೆಯಲ್ಲಿ ಈ ಕೆಳಕಂಡ ರೈತರಿಗೆ ಮತ್ತು ಸಾಲಗಳಿಗೆ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ. (ದಿನಾಂಕ: 10.07.2018 ಕ್ಕೆ ಇದ್ದಂತೆ)
    ಅ. ಬೆಳೆ ಸಾಲ ಪಡೆದ ರೈತರು ಸರ್ಕಾರಿ, ಸಹಕಾರಿ ಮತ್ತು ಇತರೇ ಕ್ಷೇತ್ರದ ನೌಕರರಾಗಿದ್ದು ಪ್ರತೀ ತಿಂಗಳು ಒಟ್ಟಾರೆ ರೂ.20,000.00ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಂತಹ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
    ಆ. ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದ್ದಲ್ಲಿ ಅಂತಹ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
    ಇ. ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಒತ್ತೆ ಇಟ್ಟುಕೊಂಡು ನೀಡುವ ಅಡವು ಸಾಲಗಳಿಗೆ, ಚಿನ್ನಾಭರಣಗಳನ್ನು ಅಡವಿಟ್ಟುಕೊಂಡು ನೀಡುವ ಚಿನ್ನಾಭರಣ ಸಾಲಗಳಿಗೆ, ವಾಹನಗಳನ್ನು ಖರೀದಿಸಲು ನೀಡುವ ಸಾಲಗಳಿಗೆ, ಪಶು ಭಾಗ್ಯ ಯೋಜನೆಯಲ್ಲಿ ಪಶು ಆಹಾರ ಕೊಳ್ಳಲು ನೀಡುವ ಸಾಲಗಳಿಗೆ, ಮೀನುಗಾರಿಕೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ, ಸ್ವಸಹಾಯ ಗುಂಪುಗಳಿಗೆ ಮತ್ತು ಜಂಟಿ ಬಾಧ್ಯತಾ ಗುಂಪುಗಳಿಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
    ಈ. ರೈತರ ಹೆಸರಿನಲ್ಲಿ ದಿನಾಂಕ:10.7.2018ಕ್ಕೆ ಡಿಸಿಸಿ / ವಾಣಿಜ್ಯ ಬ್ಯಾಂಕುಗಳಲ್ಲಿ ಅಥವಾ ಪ್ಯಾಕ್ಸ್‌ನಲ್ಲಿ ಮುದ್ದತ್ತು ಠೇವಣಿ ಇದ್ದಲ್ಲಿ ಅಂತಹ ಮೊತ್ತವನ್ನು ಹೊರಬಾಕಿಯಲ್ಲಿ ಕಳೆಯತಕ್ಕದ್ದು.
8. ಈ ಯೋಜನೆಯಲ್ಲಿ ಅರ್ಹವಿರುವ ರೂ.1.00 ಲಕ್ಷಗಳ ಅಸಲು ಮತ್ತು ಸಂಪೂರ್ಣ ಚಾಲ್ತಿ ಸಾಲಕ್ಕೆ ಸಂಬಂಧಿಸಿದ ಬಡ್ಡಿಯನ್ನು ಜಾರಿಯಲ್ಲಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಭರಿಸಲಾಗುವುದು. ಸುಸ್ತಿಯಾದ ಪ್ರಕರಣಗಳಲ್ಲಿ ಬಡ್ಡಿಯನ್ನು ರೈತರು ಭರಿಸತಕ್ಕದ್ದು. ಈ ಯೋಜನೆಯಲ್ಲಿ ಲಾಭ ಪಡೆಯಲು ಚಾಲ್ತಿ ಸಾಲದ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮತ್ತು ಸುಸ್ತಿ ಸಾಲದ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ: 31.03.2019ರೊಳಗೆ ಮರುಪಾವತಿಸತಕ್ಕದ್ದು.
9. ಯಾವುದೇ ರೈತರು ಒಂದಕ್ಕಿಂತ ಹೆಚ್ಚಿನ ಸಹಕಾರ ಸಂಘ/ಸಹಕಾರ ಬ್ಯಾಂಕುಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಂಸ್ಥೆಯಿಂದ ಮಾತ್ರ ಸಾಲ ಮನ್ನಾ ಸೌಲಭ್ಯ ಪಡೆಯತಕ್ಕದ್ದು.
10. ಸಾಲ ಮನ್ನಾ ಯೋಜನೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರು ಆಡಳಿತಾತ್ಮಕ ಮಾರ್ಗಸೂಚಿಗಳನ್ನು ಹೊರಡಿಸಿ ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಳ್ಳುವುದು.
11. ಈ ಯೋಜನೆಯಲ್ಲಿ ಅರ್ಹ ರೈತ ಫಲಾನುಭವಿ ಹಾಗೂ ಸಾಲ ಮನ್ನಾ ಮೊತ್ತವನ್ನು ಗುರುತಿಸಲು ಅನುಸರಿಸಬೇಕಾದ ವಿಧಿ–ವಿಧಾನಗಳ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಅಮುಕಾ:ಆಇ:4607, ದಿನಾಂಕ:09.08.2018ರಲ್ಲಿ ನೀಡಿರುವ ಸಹಮತಿ ಮತ್ತು ಸಚಿವ ಸಂಪುಟ ದಿನಾಂಕ: 09.08.2018ರ ಸಭೆ ಸಂಖ್ಯೆ 5ರಲ್ಲಿನ ಕಾರ್ಯಸೂಚಿ ಕ್ರಮಸಂಖ್ಯೆ-9ರಲ್ಲಿ ಅನುಮೋದಿಸಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪ್ರಿ7) ಪ್ರತಿಗಳು: 500

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-III | ಬೆಂಗಳೂರು, ಸೋಮವಾರ, ಸೆಪ್ಟೆಂಬರ್ ೨೪, ೨೦೧೮ (ಅಶ್ವಯುಜ ೨, ಶಕ ವರ್ಷ ೧೯೪೦) | ಸಂ. ೧೩೬೪ |
|---|---|---|
| *Part-III* | *Bengaluru, Monday, September 24, 2018 (Ashwayuja 2, Shaka Varsha 1940)* | *No. 1364* |


**ಸಹಕಾರ ಸಚಿವಾಲಯ**

**ತಿದ್ದುಪಡಿ ಆದೇಶ**

**ಸಂಖ್ಯೆ: ಸಿಒ 163 ಸಿಎಲ್ಎಸ್ 2018, ಬೆಂಗಳೂರು, ದಿನಾಂಕ: 22.09.2018.**

ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ:10.07.2018ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರೆತಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ 163 ಸಿಎಲ್ಎಸ್ 2018, ದಿನಾಂಕ: 14.08.2018 ರಂದು ಸಾಲ ಮನ್ನಾ ಆದೇಶವನ್ನು ಹೊರಡಿಸಲಾಗಿದೆ.

ಈ ಮಧ್ಯೆ ಸಾಲ ಮನ್ನಾ ಆದೇಶದಲ್ಲಿ ನಮೂದಿಸಿರುವ ಕೆಲವೊಂದು ಷರತ್ತುಗಳಿಂದಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುವುದರಿಂದ ದಿನಾಂಕ: 14.08.2018 ರಂದು ಹೊರಡಿಸಲಾಗಿರುವ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾರ್ಗದರ್ಶನ/ ಸ್ಪಷ್ಟೀಕರಣ ಕೋರಿ ಸಹಕಾರ ಸಂಘಗಳ ನಿಬಂಧಕರು ತಮ್ಮ ದಿನಾಂಕ: 03.09.2018ರ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

- "ಕುಟುಂಬ ಸದಸ್ಯರ" ವ್ಯಾಖ್ಯಾನ.
- ಮಾಸಿಕ ರೂ. 20,000/- ವರೆಗಿನ ವೇತನದಾರರು/ಪಿಂಚಣಿದಾರರು ಮತ್ತು ಆದಾಯ ತೆರಿಗೆ ಪಾವತಿದಾರರಿಗೆ ಯೋಜನೆ ಅನ್ವಯಿಸುವ ಬಗ್ಗೆ.
- ಯೋಜನಾ ಫಲಾನುಭವಿಗಳು ಮುದ್ದತ್ತು ಠೇವಣಿಗಳ ಬಗ್ಗೆ.
- ರೈತರ ಸಾಲದ ಉಳಿತಾಯ ಖಾತೆಗೆ ಸಾಲ ಮನ್ನಾ ಮೊಬಲಗು ಡಿ.ಬಿ.ಟಿ. ಮೂಲಕ ವರ್ಗಾಯಿಸುವ ಬಗ್ಗೆ.

ಈ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ವೇತನದಾರರು, ಪಿಂಚಣಿದಾರರು, ಆದಾಯ ತೆರಿಗೆ ಪಾವತಿದಾರರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಜಾರಿಗೊಳಿಸುವುದು, ಮುದ್ದತ್ತು ಠೇವಣಿ ಷರತ್ತನ್ನು ಕೈಬಿಡುವುದು, ಸಾಲ ಮನ್ನಾ ಮೊತ್ತವನ್ನು ಡಿ.ಬಿ.ಟಿ. ಮೂಲಕ ಜಮಾ ಮಾಡಲಾಗುವುದು ಎಂಬ ಷರತ್ತನ್ನು ಸಡಿಲಿಸಿ ರೈತರ ಉಳಿತಾಯ ಖಾತೆಗೆ ಜಮಾ ನೀಡಿ ಡಿ.ಸಿ.ಸಿ. ಬ್ಯಾಂಕುಗಳು ಈ ಮೊತ್ತವನ್ನು ಸಂಘ/ಬ್ಯಾಂಕುಗಳಲ್ಲಿನ ರೈತರ ಸಾಲದ

ಖಾತೆಗೆ ವರ್ಗಾಯಿಸಲು ಮತ್ತು ಸಾಲ ಮನ್ನಾ ಮೊತ್ತ ಕ್ಲೇಮ್ ಮಾಡಲು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸರಳ ಮಾರ್ಗಸೂಚಿಗಳನ್ನು ನಿಬಂಧಕರು ಹೊರಡಿಸಲು ಸಚಿವ ಸಂಪುಟದ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ, ಅನುಮತಿಸಿದೆ. ಅದರಂತೆ ಕೆಳಕಂಡ ತಿದ್ದುಪಡಿ ಆದೇಶ.

ಸಾಲ ಮನ್ನಾ ಆದೇಶ ಸಂಖ್ಯೆ: ಸಿಒ 163 ಸಿಎಲ್‌ಎಸ್ 2018, ದಿನಾಂಕ: 14.08.2018ರ ಆದೇಶದಲ್ಲಿನ ಷರತ್ತುಗಳಿಗೆ, ಈ ಕೆಳಕಂಡಂತೆ ಮಾರ್ಪಡಿಸಿ, ತಿದ್ದುಪಡಿ ಆದೇಶ ಹೊರಡಿಸಲಾಗಿದೆ.

- ಷರತ್ತು ಸಂಖ್ಯೆ: 6 ರಲ್ಲಿ ಈಗಿರುವ ಷರತ್ತಿಗೆ ಬದಲಾಗಿ **"ರೈತರ ಉಳಿತಾಯ ಖಾತೆಗೆ ಸಾಲ ಮನ್ನಾ ಮೊತ್ತವನ್ನು ಜಮಾ ನೀಡಿ, ಡಿ.ಸಿ.ಸಿ. ಬ್ಯಾಂಕುಗಳು ಈ ಮೊತ್ತವನ್ನು ಸಂಘ/ಬ್ಯಾಂಕಿನಲ್ಲಿರುವ ರೈತರ ಸಾಲದ ಖಾತೆಗೆ ಕೂಡಲೇ ವರ್ಗಾಯಿಸುವುದು"** ಎಂದು ಮಾರ್ಪಡಿಸಲಾಗಿದೆ.

- ಷರತ್ತು ಸಂಖ್ಯೆ: 7 ರಲ್ಲಿನ (ಅ) ಮತ್ತು (ಆ) ಷರತ್ತಿಗೆ ಬದಲಾಗಿ **"ವೇತನದಾರರು/ಪಿಂಚಣಿದಾರರು/ ಆದಾಯ ತೆರಿಗೆ ಪಾವತಿದಾರರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಯೋಜನೆ ಜಾರಿಗೊಳಿಸುವುದು"** ಎಂದು ಮಾರ್ಪಡಿಸಲಾಗಿದೆ.

- ಷರತ್ತು ಸಂಖ್ಯೆ: 7 (ಈ) ರನ್ನು ಕೈಬಿಡಲಾಗಿದೆ.

- ಷರತ್ತು ಸಂಖ್ಯೆ: 10 ರಲ್ಲಿ ಈಗಿರುವ ಷರತ್ತಿಗೆ ಬದಲಾಗಿ **"ಸಹಕಾರ ಸಂಘಗಳ ಸಾಲ ಮನ್ನಾ ಮೊತ್ತ ಕ್ಲೇಮ್ ಮಾಡಲು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸರಳವಾದ ಮಾರ್ಗಸೂಚಿಗಳನ್ನು ನಿಬಂಧಕರು ನೀಡುವುದು"** ಎಂದು ಸೇರಿಸಿ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 250

ಅನುಬಂಧ - ೨

ಅನುಬಂಧ - 2

| CLWS \|BANK \|CONSOLIDATED REPORT District Wise | | | |
|---|---|---|---|
| **SLNO** | **DISTRICT** | **NO OF LOANEE** | **AMOUNT** |
| 1 | BAGALKOTE | 7017 | 52,72,24,875.09 |
| 2 | BALLARY | 45997 | 3,96,83,79,157.38 |
| 3 | BANGALORE RURAL | 5451 | 50,96,87,777.21 |
| 4 | BANGALORE URBAN | 855 | 6,75,94,531.36 |
| 5 | BELAGAVI | 44635 | 3,45,57,58,665.42 |
| 6 | BIDAR | 15835 | 1,30,55,59,040.68 |
| 7 | BIJAPUR | 22863 | 2,02,15,05,168.99 |
| 8 | CHAMARAJANAGAR | 16704 | 1,64,34,89,181.97 |
| 9 | CHIKKABALLAPURA | 17992 | 1,87,57,04,196.81 |
| 10 | CHIKMAGALUR | 26803 | 2,11,56,03,880.31 |
| 11 | CHITRADURGA | 47367 | 3,75,07,36,156.57 |
| 12 | DAKSHINA KANNADA | 2743 | 14,97,78,092.20 |
| 13 | DAVANAGERE | 38277 | 2,99,96,78,637.65 |
| 14 | DHARWAD | 47223 | 3,87,80,03,150.57 |
| 15 | GADAG | 49440 | 4,08,18,77,086.93 |
| 16 | GULBARGA | 95523 | 6,34,85,44,220.00 |
| 17 | HASSAN | 42885 | 3,52,95,52,753.50 |
| 18 | HAVERI | 75199 | 5,73,31,25,151.64 |
| 19 | KODAGU | 4313 | 31,26,57,675.58 |
| 20 | KOLAR | 18480 | 1,98,47,84,844.40 |
| 21 | KOPPAL | 40555 | 2,92,89,91,402.57 |
| 22 | MANDYA | 18449 | 1,46,21,31,872.26 |
| 23 | MYSORE | 39830 | 3,20,93,16,504.72 |
| 24 | RAICHUR | 63236 | 4,80,03,45,728.37 |
| 25 | RAMANAGARA | 4009 | 39,72,45,372.23 |
| 26 | SHIMOGA | 32537 | 2,07,48,44,311.91 |
| 27 | TUMKUR | 43976 | 3,96,71,71,264.57 |
| 28 | UDUPI | 2289 | 10,93,70,583.55 |
| 29 | UTTARA KANNADA | 1375 | 5,94,24,384.13 |
| 30 | YADGIR | 50815 | 3,21,09,05,164.61 |
| | **TOTAL** | **922673** | **72,47,89,90,833.18** |

ವಿಶೇಷ ನೋಡಲ್ ಅಧಿಕಾರಿ
ಬೆಳೆ ಸಾಲ ಮನ್ನಾ ಯೋಜನೆ-2018
ಹಾಗೂ ಸರ್ಕಾರದ ಕಾರ್ಯದರ್ಶಿ (ಸಿ.ಆ.ಸು.ಇ) (ಎ&ಆರ್)

5/3/2021

ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ವಿತ್ತೀಯ ಸುಧಾರಣೆ)

ಅನುಬಂಧ - 3

ಅನುಬಂಧ - 3

| CLWS \|BANK \|CONSOLIDATED REPORT Bank Wise | | | |
|---|---|---|---|
| **SLNO** | **Bank Name** | **NO OF LOANEE** | **AMOUNT** |
| 1 | ALLAHABAD BANK | 60 | 4931187.76 |
| 2 | ANDHRA BANK | 1819 | 114606324.65 |
| 3 | AXIS BANK LTD | 2928 | 90860968.18 |
| 4 | BANK OF BARODA | 1233 | 54686495.62 |
| 5 | BANK OF INDIA | 5762 | 480543114.11 |
| 6 | BANK OF MAHARASHTRA | 3036 | 265752581.40 |
| 7 | CANARABANK | 103751 | 9259761313.80 |
| 8 | CBI | 4916 | 396388539.10 |
| 9 | CORPORATION BANK | 37138 | 4119397281.93 |
| 10 | DCB BANK LTD. | 216 | 7777046.02 |
| 11 | DENA BANK | 695 | 58191696.06 |
| 12 | Federal Bank | 295 | 20701928.24 |
| 13 | HDFC Bank | 4893 | 329647278.28 |
| 14 | ICICI Bank Ltd. | 6398 | 186780412.52 |
| 15 | IDBI BANK | 2237 | 192017817.50 |
| 16 | INDIAN BANK | 2505 | 230203401.43 |
| 17 | Indian Overseas Bank | 7353 | 458399051.40 |
| 18 | Karnataka Bank Ltd | 8857 | 610714059.21 |
| 19 | Karnataka Vikas Grameena Bank | 133283 | 9501719623.79 |
| 20 | KARUR VYSYA BANK | 2 | 224340.46 |
| 21 | KAVERI GRAMEENA BANK | 75163 | 6421162145.06 |
| 22 | KBS BANK | 312 | 12243631.69 |
| 23 | Kotak Mahindra Bank | 575 | 29235681.06 |
| 24 | Oriental Bank of Commerce | 801 | 84829787.62 |
| 25 | Pragathi Krishna Gramin Bank | 245199 | 17268057281.39 |
| 26 | PUNJAB NATIONAL BANK | 4690 | 339408764.73 |
| 27 | RBL Bank | 641 | 32182510.75 |
| 28 | SOUTH INDIAN BANK | 14 | 387528.71 |
| 29 | STATE BANK OF INDIA | 148978 | 11996497398.40 |
| 30 | SYNDICATE BANK | 61495 | 4999835440.44 |
| 31 | Tamilnad Mercantile Bank | 11 | 367871.71 |
| 32 | UCO BANK | 1426 | 135396181.35 |
| 33 | UNION BANK OF INDIA | 11033 | 849682607.74 |
| 34 | United Bank of India | 3 | 310153.93 |
| 35 | VIJAYA BANK | 44955 | 3926089387.17 |
| | **TOTAL** | **922673** | **72,47,89,90,833.18** |

ವಿಶೇಷ ನೋಡೆಲ್ ಅಧಿಕಾರಿ

ಬೆಳೆ ಸಾಲ ಮನ್ನಾ ಯೋಜನೆ-2018

ಹಾಗೂ ಸರ್ಕಾರದ ಕಾರ್ಯದರ್ಶಿ (ಸಿ.ಆ.ಸು.ಇ) (ಎ&ಆರ್)

5/3/2021

ಸರ್ಕಾರದ ಕಾರ್ಯದರ್ಶಿ

ಆರ್ಥಿಕ ಇಲಾಖೆ

(ವಿತ್ತೀಯ ಸುಧಾರಣೆ)

ಅನುಬಂಧ - 4

ಅನುಬಂಧ - 4

| CLWS BANK CONSOLIDATED REPORT District Wise | | |
|---|---|---|
| **SLNO** | **DISTRICT** | **NO OF LOANEE** |
| 1 | Bagalkote | 154 |
| 2 | BALLARY | 1682 |
| 3 | Bangalore Rural | 210 |
| 4 | BANGALORE URBAN | 22 |
| 5 | BELAGAVI | 720 |
| 6 | Bidar | 428 |
| 7 | Bijapur | 3010 |
| 8 | CHAMARAJANAGAR | 360 |
| 9 | CHIKKABALLAPURA | 308 |
| 10 | CHIKMAGALUR | 2165 |
| 11 | CHITRADURGA | 3161 |
| 12 | DAKSHINA KANNADA | 121 |
| 13 | DAVANAGERE | 1574 |
| 14 | DHARWAD | 3778 |
| 15 | GADAG | 3250 |
| 16 | GULBARGA | 4363 |
| 17 | HASSAN | 1328 |
| 18 | Haveri | 4012 |
| 19 | KODAGU | 127 |
| 20 | Kolar | 542 |
| 21 | KOPPAL | 1439 |
| 22 | MANDYA | 867 |
| 23 | Mysore | 13004 |
| 24 | RAICHUR | 2069 |
| 25 | RAMANAGARA | 200 |
| 26 | SHIMOGA | 1574 |
| 27 | TUMKUR | 1528 |
| 28 | UDUPI | 111 |
| 29 | UTTARA KANNADA | 170 |
| 30 | YADGIR | 1977 |
| | **TOTAL** | **54254** |

ವಿಶೇಷ ಅಧಿಕಾರಿ

ಬೆಳೆ ಸಾಲ ಮನ್ನಾ ಯೋಜನೆ-2018

ಹಾಗೂ ಸರ್ಕಾರದ ಕಾರ್ಯದರ್ಶಿ (ಸಿ.ಆ.ಸು.ಇ) (ಎ&ಆರ್)

5/3/2021

ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ವಿತ್ತೀಯ ಸುಧಾರಣೆ)

ಅನುಬಂಧ - 5

ಅನುಬಂಧ - 4

| CLWS \|BANK \|CONSOLIDATED REPORT Bank Wise | | |
|---|---|---|
| **SLNO** | **Bank Name** | **NO OF LOANEE** |
| 1 | ALLAHABAD BANK | 1 |
| 2 | ANDHRA BANK | 54 |
| 3 | AXIS BANK LTD | 482 |
| 4 | BANK OF BARODA | 151 |
| 5 | BANK OF INDIA | 107 |
| 6 | Bank of Maharashtra | 93 |
| 7 | CANARABANK | 2407 |
| 8 | CBI | 203 |
| 9 | CORPORATION BANK | 2158 |
| 10 | DCB BANK LTD. | 7 |
| 11 | DENA BANK | 71 |
| 12 | Federal Bank | 96 |
| 13 | HDFC Bank | 646 |
| 14 | ICICI Bank Ltd. | 542 |
| 15 | IDBI BANK | 93 |
| 16 | INDIAN BANK | 19 |
| 17 | Indian Overseas Bank | 219 |
| 18 | Karnataka Bank Ltd | 11808 |
| 19 | KARNATAKA VIKAS GRAMEENA BANK | 5746 |
| 20 | KAVERI GRAMEENA BANK | 4698 |
| 21 | KBS BANK | 77 |
| 22 | Kotak Mahindra Bank | 7 |
| 23 | Oriental Bank of Commerce | 34 |
| 24 | PRAGATHI KRISHNA GRAMIN BANK | 10843 |
| 25 | PUNJAB NATIONAL BANK | 136 |
| 26 | RBL Bank | 19 |
| 27 | STATE BANK OF INDIA | 5097 |
| 28 | SYNDICATE BANK | 2703 |
| 29 | UCO BANK | 2924 |
| 30 | UNION BANK OF INDIA | 870 |
| 31 | VIJAYA BANK | 1943 |
| | **TOTAL** | **54254** |

ವಿಶೇಷ ಕರ್ತವ್ಯ ಅಧಿಕಾರಿ

ಬೆಳೆ ಸಾಲ ಮನ್ನಾ ಯೋಜನೆ-2018

ಹಾಗೂ ಸರ್ಕಾರದ ಕಾರ್ಯದರ್ಶಿ (ಸಿ.ಆ.ಸು.ಇ) (ಎ&ಆರ್)

5/3/2021

ಸರ್ಕಾರದ ಕಾರ್ಯದರ್ಶಿ.
ಆರ್ಥಿಕ ಇಲಾಖೆ
(ಆರ್ಥಿಕ ಸುಧಾರಣೆ)

ಅನುಬಂಧ - 5

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಸಂಕಷ್ಟದಲ್ಲಿರುವ ರೈತರು, ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪಡೆದಿರುವ ಬೆಳೆ ಸಾಲ ಮನ್ನಾ ಯೋಜನೆ – 2018ರ ಕುರಿತು.

ಉಲ್ಲೇಖ: ದಿನಾಂಕ: 24.08.2018 ರಂದು ನಡೆದ ಸಚಿವ ಸಂಪುಟದ ಕಾರ್ಯಸೂಚಿ ಸಂಖ್ಯೆ 20ರಲ್ಲಿ ಅನುಮೋದನೆ.

*****

ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸತತ ಬರಗಾಲಗಳು ಕೃಷಿ ವಲಯದಲ್ಲಿ ಒತ್ತಡವನ್ನು ಹೆಚ್ಚಿಸಲು ಕಾರಣವಾಗಿವೆ. ರಾಜ್ಯದ ಕೃಷಿ ಕ್ಷೇತ್ರವು ನಿಶ್ಚಲತೆ, ಕಡಿಮೆ ಉತ್ಪಾದಕತೆ, ಆಗಾಗ್ಗೆ ಸಂಭವಿಸುವ ಬರಗಾಲಗಳು ಮತ್ತು ಕಡಿಮೆ ಮಟ್ಟದ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳಂತಹ ಗುಣಲಕ್ಷಣಗಳನ್ನು ಹೊಂದಿದೆ. ತೊಂದರೆಗೀಡಾದ ರೈತರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವುದು ಮತ್ತು ರೈತರನ್ನು ಸಾಲದ ಹೊರೆಯಿಂದ ಮುಕ್ತಗೊಳಿಸುವುದು ರಾಜ್ಯ ಸರ್ಕಾರದ ಪ್ರಮುಖ ಬದ್ಧತೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಈ ರೈತರ ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ 2018–19ರ ಆಯವ್ಯಯದಲ್ಲಿ "ಬೆಳೆ ಸಾಲ ಮನ್ನಾ ಯೋಜನೆ" ಯನ್ನು ಘೋಷಿಸಿದೆ. ಕೃಷಿಯಲ್ಲಿ ಹೆಚ್ಚಿನ ಬಂಡವಾಳವನ್ನು ಹೂಡಿಕೆ ಮಾಡಲು ಅನುಕೂಲವಾಗುವಂತೆ ರೈತರಿಗೆ ಬೆಂಬಲ ನೀಡುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ರೈತರ ನಿರಂತರ ಉನ್ನತಿ ಮತ್ತು ಸಬಲೀಕರಣ ಈ ಯೋಜನೆಯ ದೀರ್ಘಕಾಲದ ಗುರಿಯಾಗಿದೆ.

ದಿನಾಂಕ: 05.07.2018ರಂದು ಮಂಡಿಸಿದ ಆಯವ್ಯಯ ಘೋಷಣೆಯಲ್ಲಿ ದಿನಾಂಕ: 31.12.2017 ರಂತೆ ಬಾಕಿ ಇರುವ ಎಲ್ಲಾ ರೈತರ ಎಲ್ಲಾ ಸುಸ್ತಿಯಾದ ಬೆಳೆ ಸಾಲಗಳನ್ನು ಕುಟುಂಬವೊಂದಕ್ಕೆ ರೂ. 2.00 ಲಕ್ಷ ಮೀರದಂತೆ ಸಾಲ ಮನ್ನಾ ಮಾಡುವ ಹಾಗೂ ಬೆಳೆ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಿರುವ ರೈತರ ಸಾಲಗಳಿಗೆ ಅವರು ಮರುಪಾವತಿ ಮಾಡಿರುವ ಸಾಲದ ಮೊತ್ತ ಅಥವಾ ರೂ.25,000/– ಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪ್ರೋತ್ಸಾಹಧನವಾಗಿ ನೀಡಲು ನಿರ್ಧರಿಸಿದೆ.

ದಿನಾಂಕ: 24.08.2018ರಂದು ನಡೆದ ಸಚಿವ ಸಂಪುಟ ಸಭೆಯ ಕಾರ್ಯಸೂಚಿ ಕ್ರಮ ಸಂಖ್ಯೆ 20ರಲ್ಲಿ ಸದರಿ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಆದ್ದರಿಂದ ಕೆಳಗಿನ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಎಂ 2018 (ಭಾ), ಬೆಂಗಳೂರು, ದಿನಾಂಕ: 06.09.2018.**

**1. ಯೋಜನೆಯ ವ್ಯಾಪ್ತಿ.**

**ಅ) ರೂ. 2.00 ಲಕ್ಷಗಳವರೆಗಿನ ಸುಸ್ತಿ ಸಾಲಗಳ ಮನ್ನಾ:**

ದಿನಾಂಕ: 01.04.2009ರ ನಂತರ ಮಂಜೂರಾದ ಹಾಗೂ ದಿನಾಂಕ: 31.12.2017ರಂದು ಬಾಕಿ ಇರುವ ಎನ್.ಪಿ.ಎ (ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದಂತೆ ವರ್ಗೀಕೃತವಾದ) ಸಾಲಗಳು, ರಿಸ್ಟ್ರಕ್ಚರ್ಡ್ ಸಾಲಗಳು ಮತ್ತು ಸುಸ್ತಿಯಿರುವ ಬೆಳೆ ಸಾಲಗಳನ್ನು ಪ್ರತಿ ಕುಟುಂಬಗಳಿಗೂ ರೂ. 2.00 ಲಕ್ಷ ಮೀರದಂತೆ ಕರ್ನಾಟಕ ಸರ್ಕಾರದಿಂದ ಮನ್ನಾ ಮಾಡಲಾಗುವುದು. ಅಂತಹ ಸಾಲಗಳ ಮೂರು ವಿಶಾಲ ವರ್ಗಗಳು ಈ ಯೋಜನೆಯಡಿಯಲ್ಲಿ ಅರ್ಹತೆ ಪಡೆದುಕೊಳ್ಳುತ್ತವೆ.

ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ವಿತ್ತೀಯ ಸುಧಾರಣೆ)

Manju P 5/3/2021
ಸರ್ಕಾರದ ಕಾ...
ಆರ್ಥಿಕ ಇಲಾಖೆ
(ವಿತ್ತೀಯ ಸುಧಾರಣೆ)

i. **ಕಾರ್ಯ ನಿರ್ವಹಿಸದ ಸ್ವತ್ತುಗಳು (ಎನ್.ಪಿ.ಎ):** ಭಾರತೀಯ ರಿಸರ್ವ್ ಬ್ಯಾಂ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಸಾಲ ನೀಡುವ ಸಂಸ್ಥೆಗಳಿಂದ ವರ್ಗೀಕರಣ ಮಾಡಿದ ಬೆಳೆ ಸಾಲಗಳು.

ii. **ರಿಸ್ಟ್ರಕ್ಚರ್ಡ್ ಬೆಳೆ ಸಾಲಗಳು:** ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ನೈಸರ್ಗಿಕ ವಿಕೋಪಗಳಿಂದ ಮಧ್ಯಮಾವಧಿಯ ಸಾಲಗಳಾಗಿ ಮಾರ್ಪಡಿಸಿದ ಮತ್ತು ಮೂರರಿಂದ ಐದು ವರ್ಷಗಳ ಅವಧಿಯಲ್ಲಿ ಮರುಪಾವತಿಸಬಹುದಾದ ಸಾಲಗಳು.

iii. **ಅವಧಿ ಮೀರಿದ ಸುಸ್ತಿ ಬೆಳೆ ಸಾಲಗಳು:** ದಿ:31.12.2017 ರಂದು ಅವಧಿ ಮೀರಿದ ಸಾಲವನ್ನು ಹೊಂದಿರುವ ಬೆಳೆ ಸಾಲಗಳು.

**ಬ) <u>ಸುಸ್ತಿಯಲ್ಲದ ಸಾಲಗಳಿಗೆ ಪ್ರತಿ ರೈತ ಕುಟುಂಬಕ್ಕೆ ರೂ. 25,000/– ಗಳವರೆಗೆ ಪ್ರೋತ್ಸಾಹಧನ:</u>**
ದಿ: 31.12.2017 ರಂದು ಬಾಕಿಯಿರುವ ಸುಸ್ತಿಯಲ್ಲದ ಬೆಳೆ ಸಾಲಗಳನ್ನು ಹೊಂದಿರುವ ಹಾಗೂ ಹಿಂದಿನ ಸಾಲಿನ ಬೆಳೆ ಸಾಲಗಳನ್ನು ನಿಯಮಿತವಾಗಿ ಮರುಪಾವತಿ ಮಾಡಿದ ರೈತ ಕುಟುಂಬಕ್ಕೆ ಅವರು ಪಡೆದ ಬೆಳೆ ಸಾಲದ ಮೊತ್ತ ಅಥವಾ ರೂ. 25,000/- ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಪ್ರೋತ್ಸಾಹಧನವಾಗಿ ನೀಡಲಾಗುವುದು.

ಕೃಷಿ, ತೋಟಗಾರಿಕಾ ಮತ್ತು ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವುದಕ್ಕಾಗಿ, ಗರಿಷ್ಠ 12 ರಿಂದ 18 ತಿಂಗಳುಗಳೊಳಗೆ ಮರುಪಾವತಿಸಬೇಕಾದ ಅಲ್ಪಾವಧಿ ಸಾಲಗಳನ್ನು ಬೆಳೆ ಸಾಲಗಳೆಂದು ಅರ್ಥೈಸಲಾಗಿದೆ. ಇವು ಸಾಂಪ್ರದಾಯಿಕ ಮತ್ತು ಸಾಂಪ್ರಾದಾಯಿಕವಲ್ಲದ ತೋಟಗಾರಿಕಾ ಬೆಳೆ ಸಾಲಗಳನ್ನು ಒಳಗೊಂಡಿರುತ್ತದೆ. ಸಾಲವನ್ನು ತೆಗೆದುಕೊಂಡಿರುವ ರೈತ, ಸಾಲ ನೀಡುವ ಸಂಸ್ಥೆಗಳ ಶಾಖೆ ಹಾಗೂ ರೈತನ ಭೂಮಿಯು ಕರ್ನಾಟಕ ರಾಜ್ಯದಲ್ಲಿ ಇರಬೇಕು.

**2. ಸಾಲ ನೀಡುವ ಸಂಸ್ಥೆಗಳು:**

ಎಲ್ಲಾ ನಿಗದಿತ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಒಟ್ಟಾಗಿ ಸೇರಿಸಿ **"ಸಾಲ ನೀಡುವ ಸಂಸ್ಥೆಗಳು"** ಎಂದು ಕರೆಯಲಾಗುತ್ತದೆ.

**3. ಕುಟುಂಬದ ವ್ಯಾಖ್ಯಾನ:**

ಕುಟುಂಬವೆಂದರೆ, ರೈತ, ಅವನ / ಅವಳ ಸಂಗಾತಿ ಮತ್ತು ಅವರ ಅವಲಂಬಿತ ಮಕ್ಕಳನ್ನು ಒಳಗೊಂಡಿದೆ.

**4. ಯೋಜನೆಯಲ್ಲಿ ಒಳಪಡದ ವರ್ಗಗಳು:**

ಈ ಯೋಜನೆಯಲ್ಲಿ ಕೆಳಗಿನವುಗಳು ಅರ್ಹವಾಗಿರುವುದಿಲ್ಲ:-

i. ವೈಯಕ್ತಿಕ ರೈತ ಕುಟುಂಬಗಳನ್ನು ಹೊರತುಪಡಿಸಿ ಎಲ್ಲಾ ಕಾನೂನುಬದ್ಧ ಸಂಸ್ಥೆಗಳಿಗೆ ನೀಡಲಾದ ಬೆಳೆ ಸಾಲ.

ii. ಕಂಪನಿಗಳು ರೈತರಿಗೆ ನೀಡಿದ ಸಾಲಗಳು. ಸಾಲ ನೀಡುವ ಸಂಸ್ಥೆಗಳು ಕಾರ್ಪೋರೇಟ್ ಗ್ಯಾರಂಟಿ ಆಧಾರದ ಮೇಲೆ ರೈತರಿಗೆ ನೀಡಿದ ಸಾಲಗಳು, ಟ್ರಸ್ಟ್‌ಗಳು ಮತ್ತು ಪಾಲುದಾರಿಕೆ

ಸಂಸ್ಥೆಗಳು ಬ್ಯಾಂಕುಗಳಿಂದ ಪಡೆದ ಸಾಲಗಳು, ಮೈಕ್ರೋ ಫೈನಾನ್ಸ್ ಇನ್ಸ್ಟಿಟ್ಯೂಷನ್ಸ್ / ನಗರ ಸಹಕಾರ ಬ್ಯಾಂಕುಗಳಿಂದ ನೀಡಲಾದ ಸಾಲಗಳು.

iii. ಕೃಷಿ ಉತ್ಪನ್ನಗಳನ್ನು ಅಡವಿಟ್ಟುಕೊಂಡು ನೀಡಿರುವ ಸಾಲಗಳು, ರೈತರಿಗೆ ನೀಡಲಾದ ಒಡವೆ / ಆಭರಣದ ಸಾಲಗಳು ಮತ್ತು ಮೀನುಗಾರಿಕೆ / ಹೈನುಗಾರಿಕೆ ಮತ್ತು ಕೃಷಿ ಸಂಬಂಧಿತ ಇತರೆ ಸಾಲಗಳು.

iv. ಸರ್ಕಾರಿ, ಅರೆ– ಸರ್ಕಾರಿ ಅಥವಾ ಅನುದಾನಿತ ಸಂಸ್ಥೆಗಳ ಮತ್ತು ಸಾರ್ವಜನಿಕ ವಲಯದ ಅಧೀನದಲ್ಲಿರುವ ನೌಕರರಿಗೆ ನೀಡಿದ ಬೆಳೆ ಸಾಲಗಳು.

v. ರಾಜ್ಯ / ಕೇಂದ್ರದ ಸಂಚಿತ ನಿಧಿಯಿಂದ ತಿಂಗಳಿಗೆ ರೂ. 15,000/– ಕ್ಕೂ ಹೆಚ್ಚಿನ ಪಿಂಚಣಿ ಪಡೆಯುವ ನಿವೃತ್ತಿ ವೇತನದಾರರಿಗೆ (ಮಾಜಿ ಸೈನಿಕರನ್ನು ಹೊರತುಪಡಿಸಿ) ನೀಡಲಾದ ಸಾಲಗಳು, ಕಳೆದ 3 ಮೌಲ್ಯಮಾಪನ ವರ್ಷಗಳಲ್ಲಿ ಯಾವುದಾದರು ಒಂದು ವರ್ಷ ಆದಾಯ ತೆರಿಗೆ ಪಾವತಿ ಮಾಡಿದವರಿಗೆ ನೀಡಲಾದ ಬೆಳೆ ಸಾಲಗಳು.

vi. ಸ್ವಸಹಾಯ ಗುಂಪುಗಳು (ಎಸ್.ಹೆಚ್.ಜಿ.ಗಳು) ಮತ್ತು ಜಂಟಿ ಹೊಣೆಗಾರಿಕೆಯ ಗುಂಪುಗಳು (JLG) / ರೈತರಿಗೆ ಸಾಲವನ್ನು ನೀಡಲು ಸಕ್ಕರೆ ಕಾರ್ಖಾನೆಗಳಿಗೆ ನೀಡಿದ ಸಾಲಗಳು, ಕಂಪನಿಗಳು / ಸಹಭಾಗಿತ್ವ ಸಂಸ್ಥೆಗಳು ಕಾಂಟ್ರಾಕ್ಟ್ ಫಾರ್ಮಿಂಗ್ ಪಡೆದುಕೊಂಡಿರುವ ಸಾಲಗಳು.

vii. ರಾಜ್ಯದ ಸಹಕಾರ ಸಂಸ್ಥೆ / ಬ್ಯಾಂಕುಗಳಿಗೆ ಘೋಷಿಸಿರುವ ಬೆಳೆ ಸಾಲ ಮನ್ನಾ ಯೋಜನೆಯ ಫಲಾನುಭವಿಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

5. **ಅನುಷ್ಠಾನ ಪ್ರಕ್ರಿಯೆ:**

<u>ಮಾಹಿತಿ ಸಂಗ್ರಹಣೆ ಮತ್ತು ಪರಿಶೀಲನೆ</u>

i. ಬ್ಯಾಂಕುಗಳು ಸಲ್ಲಿಸಬೇಕಾದ ದತ್ತಾಂಶ ಹರಿವಿನೊಂದಿಗೆ ಅನುಷ್ಠಾನ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ರೈತರು ಸಲ್ಲಿಸಿದ ಅಗತ್ಯ ವಿವರಗಳನ್ನು (ಆಧಾರ್ ಸಂಖ್ಯೆ, ರೇಷನ್ ಕಾರ್ಡ್ ಸಂಖ್ಯೆ, ಸರ್ವೆ ಸಂಖ್ಯೆ ಮುಂತಾದವು) ಕ್ರೋಢೀಕರಿಸಿದ ನಂತರ ಬ್ಯಾಂಕುಗಳು ತಮ್ಮ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಿಂದ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸುತ್ತವೆ.

ii. ಪ್ರಕ್ರಿಯೆಯ ಪ್ರಕಾರ ಬೆಳೆ ವಿಮೆ ಕ್ಲೈಮ್‌ಗಳ ಮೊತ್ತವನ್ನು ಬೆಳೆ ಸಾಲಗಳ ಖಾತೆಗೆ ಜಮಾ ಮಾಡಬೇಕು. ಕಳೆದ ಎರಡು ವರ್ಷಗಳಲ್ಲಿ ಯಾವುದೇ ಬೆಳೆ ಸಾಲಗಳು ಅಥವಾ ರೈತರ ಅವದಿ ಮೀರಿದ ಇತರ ಸಾಲಗಳಿಗೆ ಕ್ಲೈಮ್‌ಗಳ ಮೊತ್ತಗಳು ಬಂದಿದ್ದಲ್ಲಿ, ಅವುಗಳನ್ನು ರೈತರ ಬೆಳೆ ಸಾಲಗಳಿಗೆ ಜಮಾ ಮಾಡಿದ ಬಗ್ಗೆ ಬ್ಯಾಂಕುಗಳು ಕಡ್ಡಾಯವಾಗಿ ದೃಢೀಕರಿಸಬೇಕು. ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ರೈತರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದ್ದರೆ, ಈ ಯೋಜನೆಯಡಿಯಲ್ಲಿ ಅರ್ಹವಿರುವ ಸಾಲ ಮನ್ನಾ ಮೊತ್ತದಲ್ಲಿ ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ಕಡಿತಗೊಳಿಸಲಾಗುವುದು.

iii. ಈ ಯೋಜನೆಯಡಿಯಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಸಮಗ್ರತೆಗೆ ಪ್ರತಿ ಸಾಲ ನೀಡುವ ಸಂಸ್ಥೆಗಳು ಜವಾಬ್ದಾರರಾಗಿರತಕ್ಕದ್ದು. ಈ ಯೋಜನೆಯ ಅನುಷ್ಠಾನಕ್ಕೆ ಸಾಲ ನೀಡುವ ಸಂಸ್ಥೆಗಳು ಸಲ್ಲಿಸಿದ ಪ್ರತಿಯೊಂದು ದಸ್ತಾವೇಜು / ದಾಖಲೆ, ತಯಾರಿಸಲಾದ ಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು ಪ್ರತಿಯೊಂದು ಸಾಲ ನೀಡುವ ಸಂಸ್ಥೆಗಳ ಅಧಿಕೃತ

ಅಧಿಕಾರಿಯ ಸಹಿ ಮತ್ತು ಅವರ / ಅವಳ ಹೆಸರನ್ನು ಉದ್ಯೋಗಿ ಕೋಡ್ ಸಂಖ್ಯೆಯೊಂದಿಗೆ ಸಂಸ್ಥೆಯ ಮುದ್ರೆಗಳನ್ನು ಒಳಗೊಂಡಿರಬೇಕು.

iv. ವಿಭಿನ್ನ ಬ್ಯಾಂಕುಗಳು, ವಿವಿಧ ವರ್ಷಗಳಲ್ಲಿ ಎನ್‌ಪಿಎ (NPA) ಖಾತೆಗಳನ್ನು ಮತ್ತು ಮರುನಿರ್ಮಾಣ ಮಾಡಿದ (ರಿಸ್ಟ್ರಕ್ಚರ್ಡ್) ಸ್ಟ್ಯಾಂಡರ್ಡ್ ಸ್ವತ್ತುಗಳನ್ನು / ಖಾತೆಗಳನ್ನು ಇತ್ಯರ್ಥಗೊಳಿಸಲು ವಿವಿಧ "ಒನ್ ಟೈಮ್ ಸೆಟಲ್‌ಮೆಂಟ್" (OTS) ಯೋಜನೆಗಳನ್ನು ಪರಿಚಯಿಸಿವೆ. ಚಾಲ್ತಿಯಲ್ಲಿರುವ ಒಟಿಎಸ್ ಯೋಜನೆಗಳು ಮತ್ತು ಆಂತರಿಕ ನೀತಿಗಳಿಗೆ ಅನುಸಾರವಾಗಿ ಬ್ಯಾಂಕುಗಳು ಎನ್‌ಪಿಎ ಖಾತೆಗಳು / ಸ್ಟ್ಯಾಂಡರ್ಡ್ ಪುನರ್ ರಚಿಸಲಾದ ಅರ್ಹ ಖಾತೆಗಳನ್ನು ಬೆಳೆ ಸಾಲದ ಮನ್ನಾ ಯೋಜನೆಯಡಿಯಲ್ಲಿ ತೀರ್ಮಾನ ಮಾಡಿಕೊಳ್ಳಬೇಕು. ತಮ್ಮ ವೈಯಕ್ತಿಕ ಒಟಿಎಸ್ ಯೋಜನೆಯಡಿ ಬ್ಯಾಂಕುಗಳು ಮಾಡಿದ ಒಪ್ಪಂದದ ಮೇಲೆ ಪ್ರತಿ ಕುಟುಂಬಕ್ಕೂ ರೂ.2.00 ಲಕ್ಷಗಳ ಮಿತಿಗೊಳಪಟ್ಟು ಸರ್ಕಾರದ ಸಹಾಯವು ಲಭ್ಯವಿರುತ್ತದೆ.

v. ಅರ್ಹ ಸಾಲಗಾರರ ಪಟ್ಟಿಯಲ್ಲಿ ಬರುವ ಎಲ್ಲಾ ಸಾಲ ಸಂಸ್ಥೆಗಳಿಂದ ಸಂಗ್ರಹಿಸಲಾದ ಮಾಹಿತಿಯನ್ನು ಗೊತ್ತುಪಡಿಸಿದ ಪ್ರಾಧಿಕಾರದಿಂದ ಸಂಗ್ರಹಿಸಲಾಗುತ್ತದೆ. ಅದೇ ರೀತಿಯಾಗಿ ನಿಖರವಾಗಿ ಪ್ರಮಾಣೀಕರಿಸಿದ ನಂತರ ಸೂಕ್ತವಾದ ಹಣವನ್ನು ಅರ್ಹ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ರಾಜ್ಯ ಸರ್ಕಾರವು ಯೋಜನೆಯ ಅಡಿಯಲ್ಲಿ ಸ್ವೀಕರಿಸಿದ ಕ್ಲೈಮ್‌ಗಳನ್ನು ತೀರ್ಮಾನಿಸಿ / ನಿರ್ಧರಿಸಿ ಆಯಾ ಬ್ಯಾಂಕುಗಳು ನೋಡಲ್ ಶಾಖೆಗಳ ಮೂಲಕ ಸಂಬಂಧಪಟ್ಟ ಶಾಖೆಗೆ ಪ್ರಯೋಜನಗಳನ್ನು ತಲುಪಿಸಲಾಗುವುದು. ಬ್ಯಾಂಕುಗಳ ಸಾಲ ಮನ್ನಾ ಆದ್ಯತೆಯ ಕ್ರಮವು ಈ ರೀತಿಯಾಗಿರುತ್ತದೆ. ಎನ್‌ಪಿಎಗಳನ್ನು ಮೊದಲು ಮರುಪಾವತಿಸಿದ ನಂತರ ರೀಸ್ಟ್ರಕ್ಚರ್ಡ್ ಸಾಲಗಳನ್ನು ಪಾವತಿಸಲಾಗುವುದು. ತದನಂತರ ಸರಿಯಾದ ಸಮಯಕ್ಕೆ ಸಾಲಗಳನ್ನು ಮರುಪಾವತಿಸಿದ ರೈತರಿಗೆ ಪ್ರೋತ್ಸಾಹಧನವನ್ನು ಪಾವತಿಸಲಾಗುವುದು.

vi. ಅರ್ಹ ರೈತರ ಸದಸ್ಯರ ಪಟ್ಟಿಯಲ್ಲಿ ಅವನ / ಅವಳ ಹೆಸರನ್ನು ಸೇರಿಸಲಾಗಿಲ್ಲ ಎಂದು ಅಥವಾ ಅವರ ಸಾಲ ಮನ್ನಾ ಮೊತ್ತವನ್ನು ತಪ್ಪಾಗಿ ಲೆಕ್ಕ ಹಾಕಲಾಗಿದೆಯೆಂದು ಯಾವುದೇ ರೈತರು ಅಭಿಪ್ರಾಯಪಟ್ಟಲ್ಲಿ, ಅಂತಹವರು ತಾವು ಸಾಲ ತೆಗೆದುಕೊಂಡ ಬ್ಯಾಂಕ್ ಶಾಖೆಯ ಮೂಲಕ ದೂರು ಅರ್ಜಿಯನ್ನು ಕರ್ನಾಟಕ ಸರ್ಕಾರದಿಂದ ಗೊತ್ತುಪಡಿಸಿದ ಪ್ರಾಧಿಕಾರಕ್ಕೆ ಸಲ್ಲಿಸಬಹುದು.

vii. ತಾಂತ್ರಿಕ ಅವಶ್ಯಕತೆಗಳನ್ನು ಮ್ಯಾಪ್ ಮಾಡುವ ಮತ್ತು ರೂಪರೇಷೆಯ ಚೌಕಟ್ಟನ್ನು ರಚಿಸುವಲ್ಲಿ ಸರಿಯಾದ ರೀತಿಯಲ್ಲಿ ಸೂಕ್ತ ಅನುಷ್ಠಾನದ ಸವಾಲಿನ ಅವಶ್ಯಕತೆಗಳನ್ನು ಕ್ರೋಢಿಕರಿಸುವ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಗಳು ಸಮರ್ಥ ರೀತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ತೀರ್ಮಾನಿಸುತ್ತವೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿದ ಮೇಲ್ವಿಚಾರಣಾ ಸಮಿತಿಯ ಯೋಜನೆಯು ಪೂರ್ಣಗೊಳ್ಳುವವರೆಗೆ ನಿಯಮಿತ ಸಮಯದಲ್ಲಿ ಅನುಷ್ಠಾನ ಪ್ರಕ್ರಿಯೆಯನ್ನು ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡುವುದು. ಯೋಜನೆಯ ಪ್ರಗತಿಯ ವರದಿಗಳನ್ನು ನಿಯಮಿತ ಸಮಯದಲ್ಲಿ ನೋಡಲ್ ಇಲಾಖೆಯು ಮೇಲ್ವಿಚಾರಣಾ ಸಮಿತಿಗೆ ಸಲ್ಲಿಸಬೇಕು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಇ–ಆಡಳಿತ) ಇಲಾಖೆಯ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯು ಮೇಲ್ವಿಚಾರಣಾ ಸಮಿತಿಯ ಮಾರ್ಗದರ್ಶನದಲ್ಲಿ ಬೆಳೆ ಸಾಲದ ಮನ್ನಾ ಯೋಜನೆಯ ಅನುಷ್ಠಾನಕ್ಕಾಗಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ. ತಾಂತ್ರಿಕ ಸಮಿತಿಯಿಂದ ದತ್ತಾಂಶ ಏಕೀಕರಣ ಮತ್ತು ನಿರ್ವಹಣೆಗಾಗಿ

ಮಾಹಿತಿ ತಂತ್ರಜ್ಞಾನ (ಐಟಿ) ವ್ಯವಸ್ಥೆಯನ್ನು ಈ ಯೋಜನೆಯ ಸಮರ್ಥ ಅನುಷ್ಠಾನಕ್ಕೆ ಬಳಸಲಾಗುತ್ತದೆ.

viii. ಈ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯು ನೋಡಲ್ ಇಲಾಖೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಈ ಯೋಜನೆಯ ಅನುಷ್ಠಾನದ ಜವಾಬ್ದಾರಿ ವಹಿಸುವ ನೋಡಲ್ ಅಧಿಕಾರಿಯಾಗಿತ್ತಾರೆ. ಜಿಲ್ಲಾ ಮಟ್ಟದ ಬ್ಯಾಂಕರುಗಳ ಸಮಿತಿ ಫಲಾನುಭವಿಗಳ ಗುರುತಿಸುವಿಕೆ ಮತ್ತು ಅರ್ಹ ಮನ್ನಾ / ಪ್ರೋತ್ಸಾಹಕ ಮೊತ್ತವನ್ನು ತೀರ್ಮಾನಿಸಲು ಜಿಲ್ಲಾಧಿಕಾರಿಗಳಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡುವುದು. ಈ ಯೋಜನೆಯ ಸುಗಮ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ರಾಜ್ಯ ಸರ್ಕಾರದೊಂದಿಗೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸುವ ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಬೇಕು.

ix. ಕಂದಾಯ ಇಲಾಖೆಯು ಈ ಯೋಜನೆಯ ಸಂಪೂರ್ಣ ಮತ್ತು ಸಮರ್ಪಕ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಅವಶ್ಯಕವಾಗುವ ತಾಂತ್ರಿಕ ಅಧಿಕಾರಿಗಳನ್ನು ಹೊಂದಿದ ಹಾಗೂ ಆಯುಕ್ತರ ಶ್ರೇಣಿಯ ಒರ್ವ ಅಧಿಕಾರಿಯ ನೇತೃತ್ವದಲ್ಲಿ ಒಂದು ವಿಶೇಷ ಕೋಶವನ್ನು ರಚಿಸಬೇಕು. ಈ ಉದ್ದೇಶಕ್ಕಾಗಿ ಕಂದಾಯ ಇಲಾಖೆಯು ವಿಶೇಷ ಕೋಶವನ್ನು ರಚಿಸಿದ ನಂತರ ಇಲಾಖೆಯು ನೇಮಕಮಾಡಿದ ಒರ್ವ ಹಿರಿಯ ಅಧಿಕಾರಿಯು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗುತ್ತಾರೆ. ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲು ವಿಶೇಷ ಕೋಶವನ್ನು ದಿನಾಂಕ: 30.09.2018ರೊಳಗೆ ರಚಿಸಬೇಕು. ಅಲ್ಲಿಯವರೆಗೆ ಸರ್ಕಾರದ ಅಪರ ಕಾರ್ಯದರ್ಶಿ. ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ) ಇವರು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗಿತ್ತಾರೆ.

x. ಈ ವಿಶೇಷ ಕೋಶವು ಮನ್ನಾ ಮೊತ್ತಗಳನ್ನು ಪರಿಶೀಲಿಸಿ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಕಂದಾಯ ಇಲಾಖೆಗೆ ಸಲ್ಲಿಸಬೇಕು. ಕಂದಾಯ ಇಲಾಖೆಯು ತನ್ನ ಶಿಫಾರಸ್ಸುಗಳನ್ನು ಪರಿಶೀಲನೆ ಮತ್ತು ಹಣ ಬಿಡುಗಡೆಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಬೇಕು.

xi. ಯೋಜನೆಯ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ನೋಡಲ್ ಇಲಾಖೆಯಿಂದ ಪ್ರತ್ಯೇಕವಾಗಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ – ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ) / (ಇ&ಆರ್‌ಎಸ್‌ಎ) / (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸು ಇಲಾಖೆ (ಇ–ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸಹಕಾರ ಸಂಘಗಳ ನಿಬಂಧಕರು, #1. ಅಲಿ ಅಸ್ಕರ್ ರಸ್ತೆ, ಬೆಂಗಳೂರು.
13. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಸರ್ವೆ ಭವನ, ಕೆ.ಆರ್. ವೃತ್ತ, ಬೆಂಗಳೂರು.
14. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಪ್ರದೇಶ, ವಸಂತನಗರ, ಬೆಂಗಳೂರು.
15. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.
16. ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ (NIC), 6&7ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
19. ಸಂಚಾಲಕರು, ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಹಾಗೂ ಪ್ರಧಾನ ವ್ಯವಸ್ಥಾಪಕರು– ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಟ್ ಕಚೇರಿ, ಗಾಂಧಿನಗರ, ಬೆಂಗಳೂರು.
20. ಎಲ್ಲಾ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳ ಪ್ರಾದೇಶಿಕ ಮುಖ್ಯಸ್ಥರುಗಳಿಗೆ
21. ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
22. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ ಬೆಂಗಳೂರು.
23. ಶಾಖಾ ರಕ್ಷಾ ಕಡತ – ಹೆಚ್ಚುವರಿ ಪ್ರತಿ.

ಅನುಬಂಧ-6 7

## Proceedings of the Government of Karnataka

**Sub:** Guidelines on Waiver of NPA Loans under Karnataka Government Crop Loan Waiver Scheme 2018 for distressed farmers in respect of Scheduled Commercial Banks and Regional Rural Banks.

**Read:** Government Order No: FD 08 CAM 2018 (P), Bengaluru dated:06.09.2018.

*****

**Preamble:**

The details of the Crop Loan Waiver Scheme have been communicated vide above cited Government Order. As per para 5 (iv) on the waiver of NPA loan accounts, was as under:

"Different banks have introduced different "One Time Settlement" schemes to settle the NPA accounts and Restructured Standard assets/accounts of the loanees in different years. In accordance with their ongoing OTS schemes and internal policies, the banks should settle the cases of NPA accounts/standard restructured accounts of the farmers eligible under the crop loan waiver scheme. Subject to a ceiling of total benefit of Rs. 2.00 lakhs per family, Government assistance shall be available over and above the settlement made by the banks under their individual OTS scheme."

Based on the series of discussions held with the Bankers through State Level Bankers Committee on the sacrifices which can be made by the bank in case of NPA loans, on the communication of the proceedings of the Top Level Bankers meeting held on 12.12.2018 and following the approval from the competent authority, the following order is being issued.

**Government Order No: FD 08 CAM 2018 (P), Bengaluru dated: 14.06.2019**

a) In case of loans with liability less than Rs. 2.00 lakh as on 31.12.2017, in case of all banks excluding RRBs, the Government of Karnataka shall waive 75% book balance as on 31.12.2017 (cutoff date). The bank shall sacrifice 25% of the book balance of NPAs. In addition to this sacrifice banks will also waive the entire un-debited interest by the banks and the banks shall treat the accounts as closed.

b) In case of loans with liability less than Rs. 2.00 lakh as on 31.12.2017, in case of all RRBs, the Government of Karnataka shall waive 85% book balance as on 31.12.2017 (cutoff date). The bank shall sacrifice 15% of the book balance of NPAs. In addition to this sacrifice banks will also waive the entire un-debited interest by the banks and the banks shall treat the accounts as closed.

5/3/2021

ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ವಿತ್ತೀಯ ಸುಧಾರಣೆ)

c) In case of loans with liability more than Rs. 2.00 lakh as on 31.12.2017, in case of all banks excluding RRBs, Government of Karnataka shall waive 75% book balance as on 31.12.2017 (cutoff date) subject to a maximum of Rs. 2.00 lakh per family. The bank shall sacrifice 25% of the book balance of NPAs subject to a maximum of Rs. 2.00 lakh per family, subject to the farmers re-paying the remaining amount within 60 days from the date of waiver by the Government of Karnataka and in addition to this sacrifice banks will also waive the entire un-debited interest by the banks and the banks shall treat the accounts as closed.

d) In case of loans with liability more than Rs. 2.00 lakh as on 31.12.2017, in case of RRBs, Government of Karnataka shall waive 85% book balance as on 31.12.2017 (cutoff date) subject to a maximum of Rs. 2.00 lakh per family. The bank shall sacrifice 15% of the book balance of NPAs subject to a maximum of Rs. 1.00 lakh per family, subject to the farmers re-paying the remaining amount within 60 days from the date of waiver by the Government of Karnataka and in addition to this sacrifice banks will also waive the entire un-debited interest by the banks and the banks shall treat the accounts as closed.

By order and in the name of
Governor of Karnataka

(Pavan Kumar Malapati)
Deputy Secretary to Government
(Budget and Resources)
Finance Department

To,

1. Convenor, State Level Bankers Committee & General Manager, Syndicate Bank, Gandhi Nagar, Bengaluru.
2. All Regional Heads of Scheduled Commercial Banks and Chairman of Regional Rural Banks.
3. Principal Secretary to Government, Revenue Department, M.S. Building, Bengaluru.
4. Commissioner, Survey Settlements and Land Records, Survey Building, K.R. Circle, Bengaluru.

cc to,

1. The Principal Accountant General (G & SSA)/ (E&RSA)/ (A&E), Karnataka State, Bengaluru.
2. Principal Secretary to Hon'ble Chief Minister, Vidhanasoudha, Bengaluru.
3. Chief Secretary to Government, Vidhanasoudha, Bengaluru.
4. Additional Chief Secretary and Development Commissioner, Vidhana soudha, Bengaluru.
5. Additional Chief Secretary to Government, Finance Department, Vidhana soudha, Bengaluru.
6. Additional Chief Secretary to Government, DPAR (e-Governance) Department, M.S. Building, Bengaluru.
7. Principal Secretary to Government (Budget and Resource), Finance Department, Vidhana soudha, Bengaluru.
8. PS to Additional Chief Secretary to Government, VidhanaSoudha, Bengaluru.
9. PS to Additional Secretary to Government, Finance Department (Fiscal Reforms), M.S. Building, Bengaluru.
10. Guard file.
11. Office copy

ಅನುಬಂಧ-8

<u>**Proceedings of the Government of Karnataka**</u>

**Sub:** Additional Guidelines on Waiver of NPA Loans under Karnataka Government Crop Loan Waiver Scheme 2018 for distressed farmers in respect of Scheduled Commercial Banks and Regional Rural Banks.

**Read:** Government Order No: FD 08 CAM 2018 (P), Bengaluru dated:06.09.2018.
Government Order No: FD 08 CAM 2018 (P), Bengaluru dated: 14.06.2019.

*****

<u>**Preamble:**</u>

The details of the Crop Loan Waiver Scheme have been communicated vide above cited Government Orders. As per GO dated: 14.06.2019 the details of sacrifices which can be made by the banks in case of NPA loans where the liability is than Rs. 2.00 lakhs and where the liabilities is more than Rs. 2.00 lakhs is detailed.

Based on the Bankers meeting held on 07.08.2019, Convener, State Level Bankers Committee has vide its proceedings dated: 09.08.2019 has suggested the modalities to be adopted in those cases where the loan waiver amount per family exceeds Rs. 2.00 lakhs and hence waiver amount of 75% of the NPA liability as on 31.12.2017 cannot be fully released by the Government even though the NPA Loan liability is less than Rs. 2.00 lakhs, in view of the overall ceiling Rs. 2.00 lakhs per family under the Crop Loan Waiver Scheme. In view of the same the following order is issued.

<u>**Government Order No: FD 08 CAM 2018 (P-13), Bengaluru dated: 01.10.2019**</u>

a) In case of loans where the individual NPA loan liability is less than Rs. 2.00 lakhs but the waiver liability of the family exceeds Rs. 2.00 lakhs as on 31.12.2017, in case of all banks excluding RRBs, Government of Karnataka shall waive 75% book balance as on 31.12.2017 (cutoff date) subject to a maximum of Rs. 2.00 lakh per family. The bank shall sacrifice 25% of the book balance of NPAs subject to a maximum of Rs. 2.00 lakh per family, subject to the farmer/s re-paying the remaining amount within 60 days from the date of waiver by the Government of Karnataka and in addition to this sacrifice banks will also waive the entire un-debited (or unapplied) interest by the banks and the banks shall treat the accounts as closed.

...2

5/3/2021

b) In case of loans where the individual NPA loan liability is less than Rs. 2.00 lakhs but the waiver liability of the family exceeds Rs. 2.00 lakhs as on 31.12.2017, in case of all RRBs, Government of Karnataka shall waive 85% book balance as on 31.12.2017 (cutoff date) subject to a maximum of Rs. 2.00 lakh per family. The bank shall sacrifice 15% of the book balance of NPAs subject to a maximum of Rs. 1.00 lakh per family, subject to the farmers re-paying the remaining amount within 60 days from the date of waiver by the Government of Karnataka and in addition to this sacrifice banks will also waive the entire un-debited (or unapplied) interest by the banks and the banks shall treat the accounts as closed.

By order and in the name of
Governor of Karnataka

(Manju Prasannan Pillai) 4/10
Secretary to Government
(Fiscal Reforms)
*Finance Department*

To,

1. Convenor, State Level Bankers Committee & General Manager, Syndicate Bank, Gandhi Nagar, Bengaluru.
2. All Regional Heads of Scheduled Commercial Banks and Chairman of Regional Rural Banks.
3. Principal Secretary to Government, Revenue Department, M.S. Building, Bengaluru.
4. Commissioner, Survey Settlements and Land Records, Survey Building, K.R. Circle, Bengaluru.

**cc to,**

1. The Principal Accountant General (G & SSA)/ (E&RSA)/ (A&E), Karnataka State, Bengaluru.
2. Principal Secretary to Hon'ble Chief Minister, Vidhanasoudha, Bengaluru.
3. Chief Secretary to Government, Vidhanasoudha, Bengaluru.
4. Additional Chief Secretary and Development Commissioner, Vidhana soudha, Bengaluru.
5. Additional Chief Secretary to Government, Finance Department, Vidhana soudha, Bengaluru.
6. Additional Chief Secretary to Government, DPAR (e-Governance) Department, M.S. Building, Bengaluru.

7. Principal Secretary to Government (Budget and Resource), Finance Department, Vidhana soudha, Bengaluru.
8. PS to Additional Chief Secretary to Government, VidhanaSoudha, Bengaluru.
9. PS to Additional Secretary to Government, Finance Department (Fiscal Reforms), M.S. Building, Bengaluru.
10. Guard file.
11. Office copy